# ಗಣೇಶಯ್ಯನವರ ಕಥನ ಸಾಹಿತ್ಯ – ಸ್ತ್ರೀ ಸಂವೇದನೆಯ ರೂಪ (ಕಥನ ಸಾಹಿತ್ಯವನ್ನು ಅನುಲಕ್ಷಿಸಿ)

**ಸಂಜಯಕುಮಾರ ಶಿ. ಹಾರೋಬಿಡಿ***

**DOI: https://doi.org/10.5281/zenodo.21438125**

**ABSTRACT**

ಕೆ.ಎನ್. ಗಣೇಶಯ್ಯನವರ ಕಥನ ಸಾಹಿತ್ಯವು ಇತಿಹಾಸ, ಕಲೆ ಮತ್ತು ಮಾನವೀಯ ಅಂತಃಕರಣದ ಅಪೂರ್ವ ಸಂಗಮವಾಗಿದ್ದು, ಅದರಲ್ಲಿ ಸ್ತ್ರೀ ಸಂವೇದನೆಯ ವಿಶಿಷ್ಟ ಅಭಿವ್ಯಕ್ತಿಯನ್ನು ಕಾಣಬಹುದಾಗಿದೆ. 'ಶಾಲಭಂಜಿಕೆ', 'ಕಲೆಯ ಬಲೆಯಲ್ಲಿ' ಮುಂತಾದ ಕಥೆಗಳ ಮೂಲಕ ನಿರ್ಜೀವ ಶಿಲ್ಪಕಲೆಗಳ ಹಿಂದಿರುವ ಮಹಿಳೆಯರ ನೈಜ ವೇದನೆ, ಸ್ವಾತಂತ್ರ್ಯದ ಹಂಬಲ ಹಾಗೂ ಬಂಡಾಯದ ಮನೋಭಾವವನ್ನು ಅವರು ಅತ್ಯಂತ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಪುರುಷ ಪ್ರಧಾನ ಸಮಾಜದ ಕಟ್ಟುಪಾಡುಗಳನ್ನು ಮೀರಿ, ಕಲೆಯ ಮೂಲಕವೇ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುವ ಮತ್ತು ತಮಗಾದ ಅನ್ಯಾಯದ ವಿರುದ್ಧ ಸೂಕ್ಷ್ಮವಾಗಿ ಪ್ರತಿಕಾರ ತೀರಿಸಿಕೊಳ್ಳುವ ಮಹಿಳಾ ಪಾತ್ರಗಳ ವಿಶ್ಲೇಷಣೆಯನ್ನು ಇಲ್ಲಿ ಮಂಡಿಸಲಾಗಿದೆ. ಐತಿಹಾಸಿಕ ಪಳೆಯುಳಿಕೆಗಳಿಗೆ ಜೀವ ತುಂಬುವ ಮೂಲಕ, ಕೇವಲ ಶಿಲ್ಪಿಗಷ್ಟೇ ಸಲ್ಲುವ ಕೀರ್ತಿಯ ಹಿಂದಿರುವ ಪ್ರೇರಕ ಶಕ್ತಿಯಾದ ಹೆಣ್ಣಿನ ತ್ಯಾಗ, ಅವಳ ನೋವು–ನಲಿವುಗಳನ್ನು ಈ ಅಧ್ಯಯನವು ಬಿಚ್ಚಿಡುತ್ತದೆ. ಆಧುನಿಕೋತ್ತರ ಕನ್ನಡ ಸಾಹಿತ್ಯದಲ್ಲಿ ಮಹಿಳಾ ಸಂವೇದನೆಯ ಭಿನ್ನ ಆಯಾಮಗಳನ್ನು ಗ್ರಹಿಸಲು ಇದು ಅತ್ಯಂತ ಸಹಕಾರಿಯಾಗಿದೆ.

**KEYWORDS:** ಕೆ.ಎನ್. ಗಣೇಶಯ್ಯ, ಕಥನ ಸಾಹಿತ್ಯ, ಸ್ತ್ರೀ ಸಂವೇದನೆ, ಶಿಲ್ಪಕಲೆ, ಮಹಿಳಾ ಅಸ್ತಿತ್ವ.

* **ಡಾ. ಸಂಜಯಕುಮಾರ ಶಿ. ಹಾರೋಬಿಡಿ,** ಕನ್ನಡ ಅಧ್ಯಾಪಕರು, ಎಂ.ಜಿ.ಆರ್.ಡಿ.ಪಿ. ಆರ್. ವಿಶ್ವವಿದ್ಯಾಲಯ, ಗದಗ.

**ಪ್ರಸ್ತಾವನೆ:**

ಸಾಹಿತ್ಯ ಸದಾ ಕಾಲ ತನ್ನ ಸ್ವರೂಪದಲ್ಲಿ ಅನೇಕ ಬದಲಾವಣೆಗಳನ್ನು ಕಾಣುತ್ತಲೆ ಹೊಸ ಪ್ರಯೋಗಗಳಿಗೆ ತನ್ನನ್ನು ಮುಖಾಮುಖಿಗೊಳಿಸುತ್ತ, ವಿಭಿನ್ನ ಆಲೋಚನೆಗಳನ್ನು ಹೊಂದಿರುವ ನವೀನ ಬರಹಗಾರರನ್ನು ಆಕರ್ಷಿಸುತ್ತ ಬೆಳೆದು ಬಂದಿದೆ. ಇವರ ಬರವಣಿಗೆಯಲ್ಲಿ ಓದುಗರನ್ನು ಸೆಳೆಯುವ ತಂತ್ರ ಹಾಗೂ ಊಹೆಗೂ ನಿಲುಕದ ವಿಷಯ ವಸ್ತುವನ್ನು ವಿಸ್ತರಿಸುವ ರೀತಿ ವಿಭಿನ್ನವಾಗಿದೆ. ಅಂತಹ ವೈವಿಧ್ಯಮಯ ಲೇಖಕರ ಕೃತಿಗಳ ಅವಲೋಕನವನ್ನು ಈ ಲೇಖನದಲ್ಲಿ ಕಾಣಬಹುದು.

ಸಾಹಿತ್ಯ ಚರಿತ್ರೆಯನ್ನು ಕಾಲಘಟ್ಟಕ್ಕೆ ಹಾಗೂ ಬರಹದ ವಸ್ತು ವಿಷಯಕ್ಕೆ ಅನುಸಾರವಾಗಿ ಅನೇಕ ಪ್ರಾಕಾರಗಳಲ್ಲಿ ವಿಭಾಗಿಸಿ ಅಧ್ಯಯನಿಸುವ ಕ್ರಮವಿದೆ. ಪ್ರತಿಯೊಂದು ಕಾಲದಲ್ಲೂ ತನ್ನದೇ ಆದ ವೈಶಿಷ್ಟ್ಯತೆಯನ್ನು ಸಾಹಿತ್ಯ ಒಳಗೊಂಡು ರಚನೆಯಾಗಿರುವುದನ್ನು ಕಾಣುತ್ತೇವೆ. ಅದರಲ್ಲೂ 21ನೇ ಶತಮಾನದ ಸಾಹಿತ್ಯಕ ಬದಲಾವಣೆಗಳು ಸಂಶೋಧಕರ ಮತ್ತು ಅಧ್ಯಯನಾಸಕ್ತರ ಕುತೂಹಲವನ್ನು ಹೆಚ್ಚಿಸಿವೆ. ಆಧುನಿಕೋತ್ತರ ಕನ್ನಡ ಸಾಹಿತ್ಯಕ್ಕೆ ವಿವಿಧ ಕ್ಷೇತ್ರಗಳ ಅನೇಕ ಬರಹಗಾರರ ಕೊಡುಗೆ ಮೌಲ್ಯಯುತವಾದದ್ದು. ಇತ್ತೀಚಿನ ದಿನಗಳಲ್ಲಿ ವೈವಿಧ್ಯಮಯವಾದ ಸಾಹಿತ್ಯ ಕೃತಿಗಳ ರಚನೆಯಾಗುತ್ತಿರುವುದು ಈ ಮಾತಿಗೆ ಪುಷ್ಟಿಯನ್ನು ನೀಡುತ್ತದೆ. ಈ ರೀತಿಯ ಬೆಳವಣಿಗೆ ಕನ್ನಡ ಭಾಷೆಯಲ್ಲಿ ನಡೆಯುತ್ತಿರುವ ಹೊಸ ಪ್ರಯೋಗಗಳಿಗೆ ಮುನ್ನುಡಿ ಎನ್ನಬಹುದು. ಜೊತೆಗೆ ಭಾಷೆಯ ಮೇಲಿರುವ ಅಭಿಮಾನ ಹಾಗೂ ತಮ್ಮ ಅನುಭವಗಳನ್ನು ಮಾತೃ ಭಾಷೆಯಲ್ಲಿ ಅಭಿವ್ಯಕ್ತ ಪಡಿಸುವ ಮಾರ್ಗವು ಆಗಿದೆ. ತಮ್ಮ ಅವಲೋಕನ ಮತ್ತು ಅನುಭವಗಳನ್ನು ಸೃಜನಶೀಲ ಕೃತಿಗಳ ಮೂಲಕ ತಾವು ಕಂಡ ಸಮಾಜದ ಚಿತ್ರಣವನ್ನು ಬರಹದ ಮೂಲಕ ತಲುಪಿಸುವ ಉದ್ದೇಶ ಹೊಂದಿರುವುದನ್ನು ಕಾಣಬಹುದಾಗಿದೆ. ಈ ನಿಟ್ಟಿನಲ್ಲಿ ಕೆ.ಎನ್.ಗಣೇಶಯ್ಯನವರು ಮುಂಚೂಣಿಯಲ್ಲಿರುವ ಬರಹಗಾರರಲ್ಲಿ ಒಬ್ಬರೆನಿಸಿಕೊಂಡಿದ್ದಾರೆ.

ವೃತ್ತಿ ಮತ್ತು ಪ್ರವೃತ್ತಿ ಭಿನ್ನವಾಗಿದ್ದರೂ ಸಾಹಿತ್ಯದ ಮೇಲಿನ ಆಸಕ್ತಿ ಇವರನ್ನು ಬರಹಗಾರರನ್ನಾಗಿ ರೂಪಿಸಿದೆ. ವಿಜ್ಞಾನ ಮತ್ತು ಸಾಹಿತ್ಯಕ್ಕೂ ಸಾಮರಸ್ಯದ ಕೊಂಡಿಯಾಗಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ವೈಜ್ಞಾನಿಕ ಜಗತ್ತಿನ ಅನ್ವೇಷಣೆಗಳು, ಹೊಸ ಹೊಸ ಶೋಧನೆಗಳು ಹಾಗೂ ವಿಸ್ಮಯಗಳನ್ನು ಕಥನದ ಮಾದರಿಯಲ್ಲಿ ವಿವರಿಸುವ ವಿಧಾನ ಅನೇಕರನ್ನು ಬೆರಗುಗೊಳಿಸಿದೆ. ಇವರ ಕಥನ ಸಾಹಿತ್ಯದಲ್ಲಿ ವಿವರಿಸಿದ ಸ್ತ್ರೀ ಸಂವೇದನೆಯ ಸ್ವರೂಪವನ್ನು ಈ ಲೇಖನದಲ್ಲಿ ಶೋಧಿಸುವ ಪ್ರಯತ್ನ ಮಾಡಲಾಗಿದೆ.

ಆಧುನಿಕೋತ್ತರ ಕಾಲಘಟ್ಟದಲ್ಲಿ ಒಬ್ಬ ಬರಹಗಾರ ಸಾಹಿತ್ಯ ಕೃತಿಗಳಲ್ಲಿ ಸ್ತ್ರೀ ಸಂವೇದನೆಗಳ ರೂಪವನ್ನು ಭಿನ್ನವಾದ ರೀತಿಯಲ್ಲಿ ಅವಲೋಕಿಸಬಲ್ಲ ಎಂಬುದಕ್ಕೆ ಅವರ ಕೃತಿಗಳೆ ನಿದರ್ಶನ. ಮಹಿಳೆ ತನ್ನ ನೋವು ನಲಿವುಗಳನ್ನು ಮುಕ್ತವಾದ ರೀತಿಯಲ್ಲಿ ಹಂಚಿಕೊಂಡಾಗ ಅದು ಅವಳ ಅನುಭವದ ರೂಪವಾಗಿರುತ್ತದೆ. ಮಹಿಳಾ ಲೇಖಕಿಯರ ಸಂವೇದನೆಗಳು ಅವರ ಲೋಕವನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗುತ್ತವೆ. ಸಾಮಾಜಿಕ ಸಮಸ್ಯೆಗಳನ್ನು ಕೇಂದ್ರೀಕರಿಸಿಕೊಂಡು, ವೈಯಕ್ತಿಕ ಬದುಕಿನಲ್ಲಿ ಕಂಡ ಏಳುಬೀಳುಗಳನ್ನು ಕಥೆ, ಕಾದಂಬರಿ, ಕವಿತೆಗಳ ಮೂಲಕ ಅಭಿವ್ಯಕ್ತಿಸಿದ್ದು ವೈಶಿಷ್ಟ್ಯಪೂರ್ಣವಾದದ್ದು. ಮಹಿಳೆಯರ ಸಂವೇದನೆಗಳನ್ನು ಪುರುಷ ಲೇಖಕರು ಕಟ್ಟಿಕೊಡುವ ಕ್ರಮ ಆಯಾ ಲೇಖಕರ ಸಂವೇದನಾಶೀಲ ಗುಣಗಳನ್ನು ತೋರ್ಪಡಿಸುತ್ತದೆ. ಈ ನಿಟ್ಟಿನಲ್ಲಿ ಗಣೇಶಯ್ಯನವರ ಕಥನ ಸಾಹಿತ್ಯದಲ್ಲಿ ಮೂರ್ತ ರೂಪದ ಅದರಲ್ಲೂ ನಿರ್ಜೀವ ರೂಪದಲ್ಲಿರುವ ಶಿಲ್ಪ ಕಲೆಗಳಲ್ಲಿ

ಅಡಗಿರುವ ಕುತೂಹಲಕಾರಿ ವಿಷಯಗಳು ನೈಜತೆಯಿಂದ ಕೂಡಿದ ಸಾಮಾನ್ಯ ಮಹಿಳೆಯ ವೇದನೆಗಳ ರೂಪವೇ ಆಗಿರುತ್ತವೆ.

"ಶಾಲಭಂಜಿಕೆ" ಗಣೇಶಯ್ಯನವರ ಮೊದಲ ಕಥಾ ಸಂಕಲನ. ಒಬ್ಬ ಸ್ತ್ರೀಯ ಸೌಂದರ್ಯವನ್ನು ಕಲೆಯಲ್ಲಿ ಬಂಧಿಸಿ ಅದು ವಿಶ್ವ ಮಾನ್ಯತೆಯನ್ನು ಪಡೆಯುವಲ್ಲಿ ಸ್ತ್ರೀ ಹೇಗೆ ಸ್ಫೂರ್ತಿಯಾದಳು ಎಂಬುದನ್ನು ಹಿಡಿದಿಟ್ಟಿದ್ದಾರೆ. ಪ್ರಾಚೀನ ಕಾಲದ ಶಿಲ್ಪಕಲೆಗಳು ನೋಡುಗರ ಮನಸ್ಸನ್ನು ಆಕರ್ಷಿಸುತ್ತವೆ. ಅವುಗಳ ಸೌಂದರ್ಯದಲ್ಲಿ ಅಡಗಿರುವ ಶಿಲ್ಪಿಯ ಕೈಚಳಕ, ಆತನ ಕೌಶಲ್ಯತೆಗೆ ಮೆಚ್ಚುಗೆ ವ್ಯಕ್ತಪಡಿಸುತ್ತೇವೆ. ಕರ್ನಾಟಕದ ಅನೇಕ ದೇವಸ್ಥಾನಗಳಲ್ಲಿ ಅವುಗಳನ್ನು ನಿರ್ಮಾಣ ಮಾಡಿದ ಶಿಲ್ಪಿಯ ಹೆಸರನ್ನು ಕಾಣುತ್ತೇವೆ. ಆದರೆ ಅದೇ ಶಿಲ್ಪಕ್ಕೆ ಸ್ಫೂರ್ತಿ ನೀಡಿದ ಸ್ತ್ರೀಯ ನೆನಪು ಸಹ ಮಾಡಿಕೊಳ್ಳುವುದಿಲ್ಲ. ಅಂದರೆ, ಕಲೆಯನ್ನು ಕೆತ್ತಿದ ಶಿಲ್ಪಿಗೆ ಹೆಚ್ಚಿನ ಗೌರವ ಪ್ರಶಂಸೆ ನೀಡಿದಂತಾಯಿತು. ಆದರೆ, ಅದೇ ಕಲೆಗೆ ಸ್ಫೂರ್ತಿಯನ್ನು ನೀಡಿದ ಮಹಿಳೆಯ ಪಾತ್ರಕ್ಕೆ ಬೆಲೆ ಇಲ್ಲದಂತಾಗುತ್ತದೆ.

"ಶಾಲಭಂಜಿಕೆಯ" ನಿರ್ಜೀವ ಶಿಲ್ಪಕ್ಕೆ ಕಥೆಗಾರರು ಮರು ಜೀವವನ್ನು ತುಂಬಿದ್ದಾರೆ. ಸ್ತ್ರೀ ಸೌಂದರ್ಯಕ್ಕೆ ಹೆಸರಾದಂತೆ, ಕಲೆಗಾರನನ್ನು ಜಗಜ್ಜಾಹಿರಗೊಳಿಸಲು ಕಾರಣಿಕರ್ತಳಾಗಬಲ್ಲಳು ಎಂಬುದಕ್ಕೆ ಈ ಕಥೆ ನಿದರ್ಶನವಾಗಬಲ್ಲದು. ಆ ಶಿಲ್ಪಿಯ ಹೆಸರು ಗೋವಿಂದ. ಇವನ ಅಸ್ತಿತ್ವಕ್ಕೆ ಒಂದು ರೂಪವನ್ನು ನೀಡುವಲ್ಲಿ ಮೊದಲಿಗಳಾಗುತ್ತಾಳೆ. ಕಲೆ ಯಾರ ಸ್ವತ್ತಲ್ಲ. ಅದನ್ನು ಅಭಿವ್ಯಕ್ತ ಪಡಿಸಲು ಅವಕಾಶ ಸಿಕ್ಕಾಗ ಅದರ ಮಾದರಿಯೊಂದು ನಮ್ಮೆದುರಿಗೆ ಇರಬೇಕಾಗುತ್ತದೆ. ಅಂತಹ ಮಾದರಿಗೆ ಕಾರಣಳಾದ ಸ್ತ್ರೀಯ ಮನೋಭೂಮಿಕೆಯನ್ನು ಚಿತ್ರಿಸಿದ್ದಾರೆ.

ಭಾರತೀಯ ವಾಸ್ತು ಶಿಲ್ಪದ ಪ್ರಸಿದ್ಧಿಗೆ ಕಾರಣವಾದ ಚಿತ್ರಕಲೆಗಳಲ್ಲಿ ಬೇಲೂರು ಹಳೇಬೀಡಿನ ದೇವಾಲಯಗಳಲ್ಲಿ ಚಿತ್ರಿಸಲಾದ ನೃತ್ಯ ಭಂಗಿಯಲ್ಲಿರುವ ಸ್ತ್ರೀ ಶಿಲ್ಪಗಳ ವೈಶಿಷ್ಟ್ಯತೆಯೂ ಪ್ರಮುಖವಾಗಿದೆ. ಅಂತಹ ಶಿಲ್ಪಗಳಿಗೆ ಒಂದು ಜೀವಂತ ಪಾತ್ರವನ್ನು ಸೃಷ್ಟಿಸಿ ಆ ಪಾತ್ರದ ಮೂಲಕ ಕಥೆ ಹೇಳುವ ಶೈಲಿ ವಿಭಿನ್ನವಾಗಿದೆ. ಕಥೆಗಾರರು ಮನುಷ್ಯನ ಮನೋಕಾಮನೆಗಳನ್ನು ಮೀರಿದ ಭಾವನೆಗಳನ್ನು ಶಿಲ್ಪಕಲೆಯಲ್ಲಿ ಕಾಣುತ್ತಾರೆ. ಹೊಯ್ಸಳರ ಕಾಲದಲ್ಲಿ ನಿರ್ಮಾಣವಾದ ಈ ದೇವಾಲಯಗಳ ಶಿಲ್ಪಕಲೆಯು ನೃತ್ಯ ಮಾಡುವ ಹೆಣ್ಣಿನ ಭಾವ ಭಂಗಿಗಳನ್ನು ಅಭಿವ್ಯಕ್ತ ಪಡಿಸುವಂತೆ ನೋಡುಗರ ಕಣ್ಮನ ಸೆಳೆಯುತ್ತವೆ. ಈ ಭಾವನೆಗಳು ಅಭಿವ್ಯಕ್ತಗೊಳ್ಳಲು ಕಾರಣ ವಿಷ್ಣುವರ್ಧನ ಕಲೆಯನ್ನು ಅಪಾರವಾಗಿ ಪ್ರೀತಿಸುತ್ತಿದ್ದ. ಅನೇಕ ವಾಸ್ತು ಶಿಲ್ಪಗಳ ನಿರ್ಮಾಣಕ್ಕೆ ಈತನ ಕೊಡುಗೆ ಮೆಚ್ಚುವಂತದ್ದು. ಆದರೆ, ಸ್ವತಃ ನಾಟ್ಯ ಪ್ರವೀಣೆಯಾಗಿದ್ದ ಶಾಂತಲೆಗೆ ವಿವಾಹದ ನಂತರ ಸಾರ್ವಜನಿಕವಾಗಿ ನಾಟ್ಯ ಪ್ರದರ್ಶಿಸುವುದನ್ನು ನಿರ್ಬಂಧಿಸುತ್ತಾನೆ.

ನಾಟ್ಯವನ್ನು ಅತ್ಯಂತ ಪ್ರೀತಿಯಿಂದ ಮತ್ತು ಆಸಕ್ತಿಯಿಂದ ರೂಢಿಸಿಕೊಂಡಿದ್ದ ಶಾಂತಲೆ ತಾನು ಯಾವ ಕ್ಷೇತ್ರದಲ್ಲಿ ಪ್ರಸಿದ್ಧಿಯನ್ನು ಪಡೆಯಬೇಕು ಅಂದುಕೊಂಡಿದ್ದಳೋ ಅದೇ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದ ಶಿಲ್ಪಿಯ ನೆರವಿನಿಂದ ಆಕೆಯ ಕಲೆಯ ಮೇಲಿನ ಆಸಕ್ತಿ ಜೀವಂತವಾಗಿ ಉಳಿಯುವಂತೆ ಮಾಡುತ್ತಾಳೆ. ಕಾಲಾಂತರದಲ್ಲಿ ಶಾಂತಲೆಯ ಚಿತ್ರದ ರಹಸ್ಯ ಬಯಲಾದಾಗ ತನ್ನ ಜೀವ ಉಳಿಯುವ ಭರವಸೆ ಇಲ್ಲದಿದ್ದರೂ ಅಂತಹ ಸಾಹಸಕ್ಕೆ ಮುಂದಾಗುತ್ತಾನೆ. ಶಾಂತಲೆ ತನ್ನ ಸ್ವಾತಂತ್ರ್ಯಕ್ಕೆ ಅಡ್ಡಿ ಬಂದ ಸಂದರ್ಭವನ್ನು ಮೀರಿ ವಿವಿಧ ನಾಟ್ಯ ಭಂಗಿಗಳಿಗೆ ವಿಶ್ವ ಪ್ರಸಿದ್ಧಿಯನ್ನು ಪಡೆಯುವಂತೆ ಮಾಡುತ್ತಾಳೆ. ಶಿಲ್ಪಿಯ ಧೈರ್ಯವನ್ನು

ಕೂಡ ಓದುಗ ಮೆಚ್ಚಲೇಬೇಕು. ಆಕೆಯ ಎರಡು ಉದ್ದೇಶ ಇಲ್ಲಿ ಸಾಕಾರಗೊಳ್ಳುತ್ತದೆ. ವಿಷ್ಣುವರ್ಧನನ ಹೆಸರು ಚರಿತ್ರೆಯುದ್ದಕ್ಕೂ ಉಳಿಯುವಂತೆ ಮಾಡುವುದು ಮತ್ತು ನಾಟ್ಯದ ಮೇಲಿನ ಆಸಕ್ತಿಯನ್ನು ಬಹಿರಂಗವಾಗಿ ಅಭಿವ್ಯಕ್ತ ಪಡಿಸಿಕೊಂಡು ಧನ್ಯತಾ ಭಾವ ಮೂಡುವುದು ಆಕೆಯ ಬದುಕಿಗೆ ಸಾರ್ಥಕತೆಯನ್ನು ತಂದುಕೊಡುತ್ತದೆ.

ಶಿಲ್ಪಕಲೆಯ ಹಿನ್ನೆಲೆಯಲ್ಲಿ ಮೂಡಿ ಬಂದ ಕಥೆ "ಕಲೆಯ ಬಲೆಯಲ್ಲಿ". ಜೀವ ಜಗತ್ತಿನಲ್ಲಿ ಒಂದು ಹೆಣ್ಣಿಗೆ ಒಂದು ಗಂಡನ್ನು ಪ್ರಕೃತಿ ಸೃಷ್ಟಿಸಿರುತ್ತದೆ. ವೈವಾಹಿಕ ಜೀವನಕ್ಕೆ ಕಾಲಿಟ್ಟ ಸತಿ ಪತಿಗಳು ಜೀವನ ಪೂರ್ತಿ ಬಾಳ ಸಂಗಾತಿಗಳಾಗಿ ಸಾರ್ಥಕತೆಯನ್ನು ಪಡೆಯಬೇಕು ಎಂಬ ಮಾತು ಹಿರಿಯರಿಂದ ಕೇಳಿ ಬರುತ್ತವೆ. ಪತಿಪತ್ನಿಯರ ನಡುವೆ ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ಹೊಂದಾಣಿಕೆ ಮುಖ್ಯ. ಈ ಕಥೆಯಲ್ಲಿ ದಾಂಪತ್ಯದ ಸಂಬಂಧಗಳು ಬೇರೆ ಸ್ವರೂಪವನ್ನು ಪಡೆಯುತ್ತದೆ. ಪತಿಯಾದವನು ವೈವಾಹಿಕ ಜೀವನದಲ್ಲಿ ಜಿಗುಪ್ಸೆಗೊಂಡು ಸನ್ಯಾಸತ್ವ ಸ್ವೀಕರಿಸಿದರೆ, ಆತನನ್ನೇ ನಂಬಿ ಬಂದ ಹೆಣ್ಣಿನ ಗೋಳು ಕೇಳುವರಾರು? ಕಥೆಯಲ್ಲಿ ಬರುವ ಕಮಲಾಂಬಿಕೆ ಮತ್ತು ದಿನ್ನಗರ ಜೀವನದಲ್ಲಿ ಇಂತಹ ಘಟನೆಯೊಂದು ನಡೆಯುತ್ತದೆ. ದಿನ್ನಗ ಎಂಬಾತ ಬೌದ್ಧ ಧರ್ಮದಲ್ಲಿ ಆಸಕ್ತನಾಗಿ ಸನ್ಯಾಸತ್ವವನ್ನು ಸ್ವೀಕರಿಸುತ್ತಾನೆ. ಹೆಂಡತಿಯನ್ನು ತಿರಸ್ಕರಿಸಿ ಧರ್ಮವನ್ನು ಉದ್ಧಾರ ಮಾಡಲು ಹೊರಟು ಹೋಗುತ್ತಾನೆ. ಯಾವ ಧರ್ಮ ತಮ್ಮಿಬ್ಬರ ದಾಂಪತ್ಯದಲ್ಲಿ ವಿರಸವನ್ನುಂಟು ಮಾಡಿತೋ ಅದೇ ಧರ್ಮದ ಮೂಲಕ ದಿನ್ನಗರಿಗೆ ಪಶ್ಚಾತ್ತಾಪ ಮೂಡುವಂತೆ ಮಾಡುತ್ತಾಳೆ.

ವಾಕಾಟಕರ ರಾಜ ಹರಿಶೇನನ ಕಾಲದಲ್ಲಿ, ಪತ್ನಿಯ ಒತ್ತಾಸೆಯಿಂದ ಅಜಂತಾದ 1ನೇ ಗುಹಾ ದೇವಾಲಯ ನಿರ್ಮಾಣವಾಗುತ್ತದೆ. ಇದರ ಮೇಲ್ವಿಚಾರಣೆಯನ್ನು ದಿನ್ನಗ ವಹಿಸಿಕೊಂಡಿರುತ್ತಾನೆ. ವಿಷ್ಣುಶರ್ಮ ಎಂಬ ಶಿಲ್ಪಗಾರನನ್ನು ಒಲಿಸಿಕೊಂಡು ಆತನ ಕುಂಚದಲ್ಲಿ ತನ್ನ ಸೌಂದರ್ಯ ಮೂಡುವಂತೆ ಮಾಡುತ್ತಾಳೆ. ತನ್ನನ್ನು ತಿರಸ್ಕರಿಸಿ ಹೋಗಿದ್ದ ಗಂಡನ ಮೇಲಿನ ಕೋಪವನ್ನು ಶಮನಗೊಳಿಸಿಕೊಳ್ಳುತ್ತಾಳೆ. ಕಮಲಾಂಬಿಕೆ ಎದುರಿಸಿದ ಸಂದಿಗ್ಧ ಸ್ಥಿತಿಯನ್ನು ಚರಿತ್ರೆಯುದ್ದಕ್ಕೂ ಕಾಣುತ್ತೇವೆ. ಅವರೆಲ್ಲರ ಪ್ರಾತಿನಿಧಿಕ ಪಾತ್ರವಾಗಿ ಈ ಕಥೆಯಲ್ಲಿ ಚಿತ್ರಿತವಾಗಿದ್ದಾಳೆ. ಕಥೆ ಕಾಲ್ಪನಿಕವಾದರೂ ವಾಸ್ತವವನ್ನು ತೆರೆದಿಡುತ್ತದೆ. ಸಮಾಜದ ಕಟ್ಟುನಿಟ್ಟಿನ ನಿಯಮಗಳಿಗೆ ಬಂಧಿಯಾಗದೆ, ಪುರುಷನಿಗೆ ಸಮಾನವಾಗಿ ಬದುಕಿ, ಕೆಲವೊಮ್ಮೆ ಬಂಡಾಯವೆದ್ದು ಪ್ರತಿಕಾರವನ್ನು ತೀರಿಸಿಕೊಂಡ ನಿದರ್ಶನವಾಗಿ ಈ ಕಥೆ ಮೂಡಿಬಂದಿದೆ.

"ಎದೆಯಾಳದಿಂದೆದ್ದ ಗೋವು", "ಧರ್ಮಸ್ತಂಭ" ಕಥೆಗಳಲ್ಲೂ ಒಂದು ಹೆಣ್ಣಿನ ಗೋಳು ಇದೆ. ತನಗಾದ ಅನ್ಯಾಯವನ್ನು ಉಗ್ರ ಹೋರಾಟದ ಮೂಲಕ ಪ್ರತಿಭಟಿಸುವುದಿಲ್ಲ. ತನ್ನ ನೋವಿಗೆ ಯಾವ ಸಂದರ್ಭ, ಘಟನೆ ಕಾರಣವಾಗಿರುತ್ತೋ ಅವುಗಳನ್ನೇ ಬಳಸಿಕೊಂಡು ನ್ಯಾಯ ದೊರಕಿಸಿಕೊಳ್ಳುತ್ತಾಳೆ. ಸ್ತ್ರೀಯ ಅಸ್ತಿತ್ವವನ್ನು ಅನ್ಯ ಮಾರ್ಗಗಳಲ್ಲಿ ಹುಡುಕಿಕೊಳ್ಳದೆ ಸಮಸ್ಯೆಗಳಲ್ಲಿಯೇ ಪರಿಹಾರವನ್ನು ಕಂಡು ಕೊಳ್ಳುವಂತೆ ಸನ್ನಿವೇಶವನ್ನು ಸೃಷ್ಟಿಸುವ ಕಥೆಗಾರರ ವಿಭಿನ್ನ ಆಲೋಚನೆಗಳಿಗೆ ನಿದರ್ಶನವಾಗಿದೆ. ಜೀವಂತ ವ್ಯಕ್ತಿಯ ಭಾವನೆಗಳನ್ನು ಅರ್ಥೈಸಿಕೊಂಡು ಅವುಗಳನ್ನು ಬರಹಕ್ಕಿಳಿಸುವ ಪ್ರಯತ್ನಗಳು ನಡೆದಿವೆ. ಕಲೆಯಲ್ಲಿ ಅರಳಿದ ಸೌಂದರ್ಯದ ಸುತ್ತ ಅನೇಕ ಸಂವೇದನಾಶೀಲ ವಿಷಯಗಳು ಅಡಗಿರುತ್ತವೆ. ಅವುಗಳನ್ನು ಗ್ರಹಿಸುವ ಸಾಮರ್ಥ್ಯ ಕಥೆಗಾರನಲ್ಲಿ ಜಾಗೃತವಾಗಬೇಕು. ಈ ಸ್ವಭಾವ ಒಡಮೂಡಿರುವುದನ್ನು ಮೇಲಿನ ಕಥೆಗಳಲ್ಲಿ ಅವಲೋಕಿಸಲು ಸಾಧ್ಯವಿದೆ.

ಮಹಿಳೆ ಅಬಲೆ, ಪುರುಷ ಪ್ರಧಾನ ಸಮಾಜದಲ್ಲಿ ತನ್ನ ಮೇಲಾಗುವ ದೌರ್ಜನ್ಯಗಳನ್ನು

ಸಹಿಸಿಕೊಂಡು ಜೀವನ ಸಾಗಿಸಬೇಕು ಎಂಬ ಅಭಿಪ್ರಾಯಗಳು ಸಾಮಾನ್ಯವಾಗಿದ್ದ ಕಾಲವಿತ್ತು. ಕುಟುಂಬ ಅಥವಾ ಮನೆತನದ ಗೌರವದ ಹೆಸರಿನಲ್ಲಿ ತನಗಾಗುವ ನೋವುಗಳನ್ನು ಸಹಿಸಿಕೊಂಡು ಬದುಕುವ ಅನಿವಾರ್ಯತೆಯಿತ್ತು. ಇದು ಸಾಮಾನ್ಯ ವರ್ಗದವರ ಸ್ಥಿತಿಯಾಗಿದ್ದರೆ, ಸ್ಥಿತಿವಂತರು ಕೂಡ ಅನೇಕ ಸಂದಿಗ್ಧ ಸ್ಥಿತಿಯಲ್ಲಿ ಜೀವನ ಅಂತ್ಯಗೊಳಿಸಿಕೊಂಡಿದ್ದಾರೆ. ಸಮಾಜದಲ್ಲಿ ಉನ್ನತ ವರ್ಗದಲ್ಲಿದ್ದೂ ತಮ್ಮ ಆಸೆ ಆಕಾಂಕ್ಷೆಗಳನ್ನು ಬೇರೆ ಬೇರೆ ರೀತಿಯಲ್ಲಿ ಪೂರೈಸಿಕೊಂಡ ಮಹಿಳೆಯರ ಕೆಲವು ಕಥನಗಳು ಇಲ್ಲಿ ಮೂಡಿ ಬಂದಿರುವುದು ಕುತೂಹಲ ಮೂಡಿಸುತ್ತದೆ.

ಚಾರಿತ್ರಿಕ ಸಂಗತಿಗಳನ್ನು ಮಾನವೀಯ ಅಂತಃಕರಣದ ನೆಲೆಯಲ್ಲಿ ಅಧ್ಯಯನಿಸುವ ಕ್ರಮ ಮಾಸ್ತಿಯವರಿಂದ ಪ್ರಾರಂಭವಾಗಿ, ಆಧುನಿಕೋತ್ತರ ಕಾಲದವರೆಗೆ ಮುಂದುವರೆದುಕೊಂಡು ಬಂದಿದೆ. ಪುರಾತನ ಕಾಲದ ಪಳೆಯುಳಿಕೆಗಳ ಹಿಂದಿರುವ ಕೌತುಕವನ್ನು ಸೃಜನಶೀಲ ಬರಹಗಾರ ಕಾಲ್ಪನಿಕ ಕಥನದ ಮೂಲಕ ನಿರೂಪಿಸುತ್ತಾನೆ. ಈ ರೀತಿಯ ಆಲೋಚನೆ ಸೂಕ್ಷ್ಮ ಸಂವೇದನಾಶೀಲ ಬರಹಗಾರನಿಗೆ ಮಾತ್ರ ಹೊಳೆಯಲು ಸಾಧ್ಯ ಎಂಬುದನ್ನು ಆಯಾ ಕಾಲಘಟ್ಟದಲ್ಲಿ ರಚನೆಯಾದ ಕಥೆಗಳಲ್ಲಿ ಗುರುತಿಸಬಹುದು.

**ಆಕರ ಗ್ರಂಥಗಳು:**


1. ಗಣೇಶಯ್ಯ ಕೆ.ಎನ್., (2007), ಶಾಲಭಂಜಿಕೆ, ಬೆಂಗಳೂರು: ಅಂಕಿತ ಪುಸ್ತಕ ಪ್ರಕಾಶನ.
2. ಗಣೇಶಯ್ಯ ಕೆ.ಎನ್., (2009), ಪದ್ಮ ಪಾಣಿ, ಬೆಂಗಳೂರು: ಅಂಕಿತ ಪುಸ್ತಕ ಪ್ರಕಾಶನ.
3. ಗಣೇಶಯ್ಯ ಕೆ.ಎನ್., (2013), ಕಲ್ದವಸಿ, ಬೆಂಗಳೂರು: ಅಂಕಿತ ಪುಸ್ತಕ ಪ್ರಕಾಶನ.